೩೯೭೪ (೪೮೭೬) **ಶ್ರೀ ಜೀವರಾಜ್ ಡಿ.ಎನ್** (ಶೃಂಗೇರಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಡು ಬಡವರಿಗೆ ಹಳದಿ ಕಾರ್ಡು ನೀಡಲು ಕೈಗೊಂಡ ಸರ್ವೇ ಕಾರ್ಯ ಮುಗಿದಿದೆಯೇ; ಇಲ್ಲದಿದ್ದಲ್ಲಿ ಯಾವಾಗ ಮುಗಿಯುತ್ತದೆ;

ಆ) ಮುಗಿದಿದ್ದಲ್ಲಿ ಎಷ್ಟು ಜನ ಬಡವರನ್ನು ಗುರುತಿಸಲಾಗಿದೆ (ಜಿಲ್ಲಾವಾರು; ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು);

ಇ) ಹಳದಿ ಕಾರ್ಡನ್ನು ವಿತರಿಸಲು ಕಾಲಮಿತಿ ಕಾರ್ಯಕ್ರಮದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಜುಲೈ ೨೦೦೫ರ ಅಂತ್ಯಕ್ಕೆ ಸಮೀಕ್ಷೆ ಕಾರ್ಯವು ಪೂರ್ಣಗೊಳ್ಳುವ ಸಂಭವವಿದೆ.

ಆ) ವಿವರಗಳು ಲಭ್ಯವಿಲ್ಲದೇ ಇರುವುದರಿಂದ ನಿಖರವಾದ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲ.

ಇ) ಪಡಿತರ ಚೀಟಿಗಳನ್ನು ನೀಡಲು ಕಾಲ ಮಿತಿ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಅದರಂತೆ, ೧ನೇ ಆಗಸ್ಟ್ ೨೦೦೫ ರಿಂದ ಗಣಕೀಕೃತ ಪಡಿತರ ಚೀಟಿಗಳನ್ನು ನೀಡಲಾಗುವುದು.

೩೯೭೫ (೩೮೦೫) **ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು** (ಶಿವಾಜಿನಗರ) :– ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕಬ್ಬನ್ ಉದ್ಯಾನ ವನದ ಬಳಿ ಇರುವ ಬಾಲ ಭವನಕ್ಕೆ ಪ್ರತಿದಿನ ಬರತಕ್ಕ ಸರಾಸರಿ ಮಕ್ಕಳ ಹಾಗೂ ಪ್ರವಾಸಿಗರ ಸಂಖ್ಯೆ ಎಷ್ಟು;

ಆ) ೨೦೦೫–೦೬ ರಲ್ಲಿ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯ ಕ್ರಮಗಳೇನು?